**ಸಾಕ್ಷಿಗೆ ದಿನಾಂಕ 03.09.2025 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ S.L.G ವಕೀಲರಿಂದ**

ನಾನು ವಿದ್ಯಾಭ್ಯಾಸ ಮಾಡಿಲ್ಲ. ವಾದಿ ಜಮೀನಿನಲ್ಲಿ ಭಾಗ ಎಂದು ದಾವೆ ಸಲ್ಲಿಸಿರುತ್ತಾರೆ. ನಮ್ಮ ಊರಿನಿಂದ ವಾದಿಯ ಗ್ರಾಮ 3 ಕಿ.ಮೀ ಅಂತರದಲ್ಲಿದೆ. ನಮ್ಮ ಜಮೀನು ಹಾಗೂ ವಾದಿಯ ಜಮೀನು ಸ್ವಲ್ಪ ದೂರಿದಲ್ಲಿದೆ. ನನಗೆ ವಾದಿ ಹಾಗೂ ಅವರ ಕುಟುಂಬದವರ ಪರಿಚಯ ಇದೆ. ದಾವಾ ಜಮೀನು ಐಟಂ ನಂಬರ-1 ಮೂಲತಃ ಸರ್ಕಾರಿ ಜಮೀನು ಎಂದರೆ ಸರಿ. ಮೃತ ಸೋಮಶೆಟ್ಟಿರವರು ವ್ಯವಸಾಯ ಮಾಡುತ್ತಿದ್ದರು. ಬೇರೆ ಏನು ಕೆಲಸ ಮಾಡುತ್ತಿದ್ದರು ನನಗೆ ಗೊತ್ತಿಲ್ಲ. ಸರ್ಕಾರದವರು ಕುಟುಂಬ ನಿರ್ವಹಣೆಗಾಗಿ ಜಮೀನನ್ನು ಮಂಜೂರು ಮಾಡುತ್ತಾರೆ ಎಂದರೆ ಸರಿಯಲ್ಲ. ಸುಮಾರು 20-30 ವರ್ಷಗಳ ಹಿಂದೆ ಸೋಮ ಶೆಟ್ಟಿರವರು ಜಮೀನನ್ನು ಸಾಗುವಳಿ ಮಾಡಲು ಅರ್ಜಿ ಸಲ್ಲಿಸಿದ್ದರು. ಸೋಮಶೆಟ್ಟಿರವರು ತಮ್ಮ ಕುಟುಂಬದವರ ಜೊತೆಗೆ ಒಂದೇ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ಸರ್ಕಾರದಿಂದ ಮಂಜೂರಾದ ಜಮೀನನ್ನು ಮಾರಾಟ ಮಾಡುವಾಗ ಸರ್ಕಾರದಿಂದ ಅನುಮತಿ ತೆಗೆದುಕೊಳ್ಳಬೇಕು ಎಂದರೆ ಸರಿ. ಜಮೀನು ಖರೀದಿಸುವಾಗ ಸರ್ಕಾರದಿಂದ ಅನುಮತಿ ಪಡೆದಿಲ್ಲ ಸಾಕ್ಷಿ ಜಮೀನು ಸೋಮಶೆಟ್ಟಿರವರಿಗೆ ಸೇರಿದ್ದಾಗಿತ್ತು ಹಾಗಾಗಿ ಅನುಮತಿ ಪಡೆಯುವ ಪ್ರಶ್ನೆ ಇರಲಿಲ್ಲ ಎಂದು ನುಡಿಯುತ್ತಾರೆ. ಸರ್ಕಾರದಿಂದ ಸೋಮಶೆಟ್ಟಿರವರಿಗೆ ಜಮೀನು ಮಂಜೂರಾಗಿದ್ದರಿಂದ ಮಾರಾಟ ಮಾಡಲು ಸರ್ಕಾರದಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು ಎಂದರೆ ಸರಿಯಲ್ಲ. ಸೋಮಶೆಟ್ಟಿರವರು ಸಾಗುವಳಿ ಚೀಟಿ ಪಡೆಯುವಾಗ ಎಷ್ಟು ಹಣ ಕಟ್ಟಿರುತ್ತಾರೆ ನನಗೆ ಗೊತ್ತಿಲ್ಲ.

ಜಮೀನು ಮಂಜೂರು ಮಾಡುವಾಗ ಕುಟುಂಬ ಸದಸ್ಯರ ಹೆಸರನ್ನು ನಮೂದಿಸಿ ಅರ್ಜಿ ಪಡೆಯುತ್ತಾರೆ ಎಂದರೆ ಸರಿಯಲ್ಲ. ಸೋಮಶೆಟ್ಟಿರವರಿಗೆ ಕುಡಿತದ ಚಟ ಹಾಗೂ ಜೂಜಾಟದ ಚಟ ಇತ್ತು ಎಂದರೆ ಸರಿಯಲ್ಲ. ದಾವಾ ಜಮೀನು ವಾದಿಯ ಒಟ್ಟು ಕುಟುಂಬದ ಆದಾಯದಿಂದ ಬಂದ ಸ್ವತ್ತು ಎಂದರೆ ಸರಿಯಲ್ಲ. ನಾನು ಜಮೀನನ್ನು ಖರೀದಿಸುವಾಗ ಸೋಮಶೆಟ್ಟಿಯವರ ಮಕ್ಕಳ ಗಮನಕ್ಕೆ ಇತ್ತು ಖರೀದಿ ಪತ್ರಕ್ಕೆ ಸೋಮಶೆಟ್ಟಿರವರ ಗಂಡು ಮಕ್ಕಳು ಸಹಿ ಮಾಡಿರುತ್ತಾರೆ ಹೆಣ್ಣು ಮಕ್ಕಳು ಸಹಿ ಮಾಡಿರುವುದಿಲ್ಲ. ಹೆಣ್ಣು ಮಕ್ಕಳ

ಸಹಿಯನ್ನು ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ದಾವಾ ಜಮೀನು ವಾದಿಯ ಕುಟುಂಬದವರ ಒಟ್ಟು ಕುಟುಂಬದ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ. ಸೋಮಶೆಟ್ಟಿರವರಿಗಾಗಲಿ ಅವರ ಮಕ್ಕಳಿಗಾಗಲಿ ದಾವಾ ಜಮೀನನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ನನಗೆ ಯಾವುದೇ ಮಾಲೀಕತ್ವದ ಹಕ್ಕು ಇಲ್ಲ ಹಾಗೂ ನಾನು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರ ಪೊಲೀಸ ವೃತ್ತಿ ಮಾಡುತ್ತಾರೆ. ಸುಶೀಲ ಸೋಮಶೆಟ್ಟಿರವರ ಸೊಸೆ. ಸುಶೀಲರವರ ಗಂಡನ ಹೆಸರು ನಾಗರಾಜು. ನಿಡಿ-1 ರಲ್ಲಿರುವ ಆಸ್ತಿ ನಾಗರಾಜು ರವರ ಭಾಗಕ್ಕೆ ಬಂದ ಆಸ್ತಿಯೆಂದು ನಮೂದಾಗಿದೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಜಮೀನನ್ನು ಕೇವಲ ಜೀವನಾಂಶಕ್ಕಾಗಿ ನೀಡಲಾಗಿದೆ ಎಂದು ನಮೂದು ಇದೆ ಎಂದರೆ ಸರಿಯಲ್ಲ. ನಿಡಿ-1 ರ ಪ್ರಕಾರ 4 ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡವ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಡಿ-1 ರ ಪ್ರಕಾರ 4 ನೇ ಪ್ರತಿವಾದಿಯ ಗಂಡ ಆಕೆಯನ್ನು ಸರಿಯಾಗಿ ನೋಡಿಕೊಳ್ಳದೇ ಇರುವುದರಿಂದ ಕೇವಲ ಜೀವನೋಪಯಕ್ಕಾಗಿ ಜಮೀನನ್ನು ದಾನ ಕೊಟ್ಟಿರುತ್ತಾರೆ ಮಾರಾಟ ಮಾಡುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಡಿ-1 ನ್ನು ಸೋಮಶೆಟ್ಟಿರವರು ಸ್ವಇಚ್ಛೆಯಿಂದ ಬರೆದುಕೊಟ್ಟಿಲ್ಲ ಒತ್ತಾಯದಿಂದ ಬರೆಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

ನಿಡಿ-1 ಕ್ಕೆ ಯಾರು ಸಹಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಶ್ರೀನಿವಾಸಶೆಟ್ಟಿ 4 ನೇ ಪ್ರತಿವಾದಿಯ ಚಿಕ್ಕಪ್ಪ ಎಂದರೆ ನನಗೆ ಗೊತ್ತಿಲ್ಲ. ಸದರಿರವರು ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಖರೀದಿಸಿದ ಜಮೀನಿನ ಖರೀದಿ ಪತ್ರದ ಸಾಕ್ಷಿದಾರರಾಗಿ ಶ್ರೀನಿವಾಸ ಶೆಟ್ಟಿರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ಶ್ರೀನಿವಾಸಶೆಟ್ಟಿರವರ ಒತ್ತಾಯದ ಮೇರೆಗೆ ದಾನ ಪತ್ರ ಹಾಗೂ ಕ್ರಯ ಪತ್ರ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸೋಮಶೆಟ್ಟಿರವರಿಂದ 1 ಎಕರೆ ಜಮೀನನ್ನು 1 ಲಕ್ಷ ಹಣಕ್ಕೆ ಖರೀದಿಸಿರುತ್ತೇನೆ. ಎರಡು ವರೆ ಎಕರೆ ಜಮೀನಿಗೆ ತಲಾ 1 ಲಕ್ಷ 25 ಸಾವಿರ ಹಣ ನೀಡಿರುತ್ತೇನೆ. ನಿಪಿ-17 ರಲ್ಲಿ ಕ್ರಯದ ಮೊಬಲಗುವನ್ನು 1 ಲಕ್ಷ 70 ಸಾವಿರ ಎಂದು

ನಮೂದು ಮಾಡಿದ್ದು ಯಾವ ಕಾರಣಕ್ಕಾಗಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಸುಮ್ಮನೆ ನಿಂತುಕೊಂಡಿರುತ್ತಾರೆ. 2 ಲಕ್ಷ 70 ಸಾವಿರ ಚಾಪಕಾಗದಕ್ಕೆ ಹಣ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಕಾಲವಕಾಶವನ್ನು ಕೇಳಿದ್ದು ಕಾಲವಕಾಶವನ್ನು ನೀಡಲಾಯಿತು.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**